ಪ್ರತಿಯೊಂದು ಹಳ್ಳಿಗಳಲ್ಲಿ ಕುಡಿಯುವುದಕ್ಕೆ ನೀರಿಲ್ಲವೆಂದು ಜನತೆ ಗಲಾಟೆ ಮಾಡುತ್ತಿದ್ದಾರೆ. ಪದೇ ಪದೇ ಅವರು ಬೆಂಗಳೂರಿಗೆ ಬರತಕ್ಕಂಥದ್ದು, ಚಳುವಳಿಯಲ್ಲಿ ಭಾಗವಹಿಸುವಂಥದ್ದು, ಇದನ್ನೆಲ್ಲಾ ಮಾಡುವುದರಿಂದ ಗ್ರಾಮೀಣ ಪ್ರದೇಶದ ಸಮಸ್ಯೆಗಳು ಉಲ್ಬಣಗೊಳ್ಳುತ್ತದೆ, ಅದಕ್ಕೋಸ್ಕರ ಸರ್ಕಾರ ದಯಮಾಡಿ ಸರಿಯಾದ ಕ್ರಮವನ್ನು ತೆಗೆದುಕೊಳ್ಳದೆ ಹೋದರೆ ಶಾಸಕರಿಗೂ ತೊಂದರೆಯಾಗುವ ಸಂದರ್ಭಗಳು ಇವೆ, ಆದಷ್ಟು ಬೇಗ ಈ ಸಮಸ್ಯೆ ಬಗೆಹರಿಸಬೇಕು. ಗ್ರಾಮ ಪಂಚಾಯಿತಿ ಕಾರ್ಯದರ್ಶಿಗಳು ಮತ್ತು ಅಂಗನವಾಡಿ ಕಾರ್ಯಕರ್ತರೆಲ್ಲಾ ಬೆಂಗಳೂರಿಗೆ ಬಂದಿರುವುದರಿಂದ ನಮಗೆ ಕುಡಿಯುವುದಕ್ಕೆ ನೀರಿಲ್ಲದ ಹಾಗಾಗಿದೆ ಎಂದು ನಮಗೆ ಹೇಳುತ್ತಿದ್ದಾರೆ. ಇದನ್ನು ಯಾವಾಗ ಪರಿಹಾರ ಮಾಡುತ್ತೀರಿ? ಎಲ್ಲಾ ಶಾಸಕರಿಗೂ ಒತ್ತಾಯ ಮಾಡುತ್ತಿರುವುದರಿಂದ ಸರ್ಕಾರ ಇದರ ಬಗ್ಗೆ ಹೆಚ್ಚು ಆಸಕ್ತಿ ವಹಿಸುವುದು ಸಮಂಜಸವೆಂದು ಈ ಸಂದರ್ಭದಲ್ಲಿ ಸರ್ಕಾರದ ಗಮನ ಸೆಳೆಯುವುದಕ್ಕೆ ಇಷ್ಟ ಪಡುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್(ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಜ್ಞಾನೇಂದ್ರರವರು ಎತ್ತಿದ ಪ್ರಶ್ನೆಗೆ ಸರ್ಕಾರ ಉತ್ತರ ಕೊಡುವ ಪೂರ್ವದಲ್ಲಿ ಅವರು ಎತ್ತಿದ್ದಾರೆ. ಶೂನ್ಯ ವೇಳೆಯನ್ನು ತಾವು ಅದನ್ನು ಪ್ರಸ್ತಾಪ ಮಾಡಿದ್ದೀರಿ, ಅಂಗನವಾಡಿ ಕಾರ್ಯಕರ್ತೆಯರ ವಿಚಾರ ಸುಪ್ರೀಂ ಕೋರ್ಟಿನಲ್ಲಿರುವುದು ತಮಗೆ ಗೊತ್ತಿದೆ. ಅದು ಒಂದು ಯೋಜನೆಯಿಂದ ಬಂದಿರತಕ್ಕಂಥದ್ದು. ಈಗಾಗಲೇ ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದಾರೆ, ಯಾರಾದರೂ ಒಬ್ಬ ಸಚಿವರು ಸರ್ಕಾರದ ಪರವಾಗಿ ಅಲ್ಲಿ ಬಂದಿರತಕ್ಕಂತಹ ಕಾರ್ಯಕರ್ತೆಯರನ್ನು ಕಂಡು ಅವರ ಬೇಡಿಕೆಗಳ ಕುರಿತಾಗಿ ಸರ್ಕಾರ ಪ್ರತಿಕ್ರಿಯೆ ಮಾಡುತ್ತದೆ, ಅವರ ಬಗ್ಗೆ ಅನುಕಂಪ ತೋರಿಸುತ್ತದೆ, ನಿಯಮಾವಳಿಗಳು ಮತ್ತು ಸಂಪನ್ಮೂಲಗಳ ಸಾಧ್ಯತೆ ಇತಿಮಿತಿಗಳಲ್ಲಿ ಅದಕ್ಕೆ ಸರಿಯಾದ ಪರಿಹಾರವನ್ನು ಕಂಡುಕೊಳ್ಳುತ್ತೇವೆ. ಕುಡಿಯುವ ನೀರಿನ ವಿಚಾರದಲ್ಲಿ ಅವರು ಪ್ರಸ್ತಾಪ ಮಾಡಿದ್ದಾರೆ, ಅದರ ಬಗ್ಗೆ ಗಮನ ಕೊಡುತ್ತೇನೆ. ಆರ್‌ಡಿಪಿಆರ್ ಕಾರ್ಯದರ್ಶಿಗಳ ಜೊತೆ ಚರ್ಚಿಸಿ ನಿರ್ಧಾರ ಮಾಡುತ್ತೇವೆ.

(viii) ವಿಷಯ : ಮಂಗಳೂರು ಹೊರವಲಯದ ಸೇತುವೆ ದುರಸ್ತಿ ಕುರಿತು.

ಶ್ರೀ ಜೆ.ಸಿ. ಮಾಧುಸ್ವಾಮಿ(ಚಿಕ್ಕನಾಯಕನ ಹಳ್ಳಿ) : ಮಾನ್ಯ ಅಧ್ಯಕ್ಷರೆ, ಮಂಗಳೂರಿನಿಂದ ಈ ಕಡೆ ಬರಬೇಕಾದರೆ, ಮಂಗಳೂರು ಹೊರ ವಲಯದ ಸೇತುವೆ ಬಹಳ ನಿಷ್ಕ್ರಿಯವಾಗಿ ಬಿಟ್ಟಿದೆ, ಅಲ್ಲಿ ಲಾರಿಗಳು ಓಡಾಡಬಾರದು ಎಂದು ಜನ ಅನೇಕ ಸಾರಿ ಪ್ರತಿಭಟನೆ ಮಾಡಿದರೂ ಸಹ ಸರ್ಕಾರ ಗಮನ ಕೊಡದ ಪರಿಣಾಮವಾಗಿ, ಮಂಗಳೂರಿನಿಂದ ಈ ಕಡೆ ಇವತ್ತು ಜನ ಸಂಚಾರ ಅಸ್ತವ್ಯಸ್ತವಾಗಿದೆ. ಸನ್ಮಾನ್ಯ ಶಾಸಕರಾದ ಜಯಪ್ರಕಾಶ್ ಹೆಗಡೆಯವರು ಶಾಸನ ಸಭೆಗೆ ಬರುವುದಕ್ಕೆ ಸಾಧ್ಯವಾಗಲಿಲ್ಲ. ಅವರು ದೂರವಾಣಿ ಮುಖಾಂತರ ನನಗೆ ತಿಳಿಸಿ ಈ ತರಹ ನಾನು ಇಲ್ಲಿ ಸಿಕ್ಕಿ ಹಾಕಿಕೊಂಡಿದ್ದೇನೆ, ಹೇಗಾದರೂ ಮಾಡಿ ಸರ್ಕಾರದ ಗಮನ

ಸೆಳೆಯಿರಿ ಎಂದು ಹೇಳಿದ್ದಾರೆ. ಮೊನ್ನೆ ನಾವು ಯಾವುದೋ ಮೈನ್ಸ್ ಬಗ್ಗೆ ಮಾತನಾಡುವಾಗ ಆ ಸೇತುವೆ ಬಗ್ಗೆ ಹೇಳಿದೆವು. ಆ ಸೇತುವೆ ಆಗಲೋ ಈಗಲೋ ಬಿದ್ದು ಹೋಗುವ ಸ್ಥಿತಿಗೆ ಬಂದಿದೆ, ಅಲ್ಲಿ 70 ಟನ್ ಭಾರ ಹೊತ್ತ ಲಾರಿಗಳು ಓಡಾಡಬಾರದು ಎಂದು ಜನಗಳ ಪ್ರತಿಭಟನೆ ಇದೆ ಎಂದು ಹೇಳಿದ್ದೆವು. ಆ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆ ಎಂದು ಸರ್ಕಾರಕ್ಕೆ ಕೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಸನ್ಮಾನ್ಯ ಅಧ್ಯಕ್ಷರೆ, ಬಹಳ ಮುಖ್ಯವಾದ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಬಹಳ ದೊಡ್ಡ ಕಾರಣವಾಗಿರುವುದರಿಂದ ಶೀಘ್ರದಲ್ಲಿಯೇ ಅದರ ಬಗ್ಗೆ ಗಮನಹರಿಸಿ ಹಣಕಾಸನ್ನು ಒದಗಿಸಿ ಅದನ್ನು ದುರಸ್ತಿಗೊಳಿಸುತ್ತೇವೆ.

ಅಧ್ಯಕ್ಷರು : ಶೂನ್ಯ ವೇಳೆಯಲ್ಲಿ ಬಹಳ ಜನ ನೋಟಿಸ್ ಕೊಟ್ಟು ಕಾಯುತ್ತಿದ್ದಾರೆ. ನಾವು ಲಿಸ್ಟ್ ಮಾಡಿದ್ದೇವೆ. ಕೆಲವು ಮುಖ್ಯ ವಿಚಾರಗಳಿಗೆ ನಾನು ಅವಕಾಶ ಮಾಡಿಕೊಟ್ಟಿದ್ದೇನೆ. ನಿಮಗೆ ನಾಳೆ ಅವಕಾಶ ಮಾಡಿಕೊಡುತ್ತೇನೆ. ಮಾನ್ಯ ಸಚಿವರು 30–40 ವಿಷಯಗಳ ಜನ ಲಿಸ್ಟ್ ಮಾಡಿದರೆ ಹೇಗೆ ಎಂದು ಹೇಳಿದರು. ನಾಳೆ ನಾಡಿದ್ದು ತಮಗೆ ಅವಕಾಶ ಮಾಡಿಕೊಡುತ್ತೇನೆ.

(ix) ವಿಷಯ : ಕಬ್ಬಿನ ಬೆಲೆ ನಿಗದಿಪಡಿಸುವುದರ ಬಗ್ಗೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೆ, ಕಬ್ಬು ಬೆಳೆದ ರೈತರು ಚಾಮರಾಜನಗರ ಮತ್ತು ಮೈಸೂರು ಸೇರಿದಂತೆ ರಾಜ್ಯಾದ್ಯಂತದ ರೈತರು ಇವತ್ತು ಬೆಂಗಳೂರು ನಗರಕ್ಕೆ ಬಂದಿದ್ದಾರೆ. ಕಬ್ಬಿಗೆ ಕೊಡತಕ್ಕಂತಹ ಬೆಲೆ ಬಹಳ ವರ್ಷಗಳ ಹಿಂದೆ ನಿಗದಿಯಾದದ್ದು. ಸುಮಾರು 825 ರಿಂದ 850 ರೂಪಾಯಿ ಕೊಡುತ್ತಿದ್ದಾರೆ. ಈಗ ಗೊಬ್ಬರದ ಬೆಲೆ ಜಾಸ್ತಿಯಾಗಿದೆ, ಅನೇಕ ವಿಚಾರಗಳಲ್ಲಿ ತೊಂದರೆಗೊಳಗಾಗಿದ್ದಾರೆ. ಆ 850 ರೂಪಾಯಿ ಅವರಿಗೆ ಯಾವುದಕ್ಕೂ ಸಾಕಾಗುವುದಿಲ್ಲ. ಈ ಪರಿಸ್ಥಿತಿ ಇರುವುದರಿಂದ 1250 ರೂಪಾಯಿಗೆ ಕಬ್ಬಿನ ಬೆಲೆಯನ್ನು ಜಾಸ್ತಿ ಮಾಡಬೇಕೆಂದು ಮುಖ್ಯ ಮಂತ್ರಿಗಳ ಮನೆಯ ಮುಂದೆ ರೈತರು ಧರಣಿ ಕೂತಿದ್ದಾರೆ. ಚಾಮರಾಜನಗರದಿಂದ ಬಂದಿದ್ದಾರೆ. ಮೈಸೂರಿನಿಂದ ಮತ್ತು ಇನ್ನು ಅನೇಕ ಕಡೆಗಳಿಂದ ರೈತರು ಬಂದಿದ್ದಾರೆ. ಇದು ಬಹಳ ಪ್ರಾಮುಖ್ಯ. ಎಲ್ಲಾ ಸಕ್ಕರೆ ಕಾರ್ಖಾನೆಗಳ ಮಾಲೀಕರನ್ನು ಕರೆಸಿ ಕೂಡಲೇ ದರವನ್ನು ಜಾಸ್ತಿ ಮಾಡಬೇಕು. 1250 ರೂಪಾಯಿ ಮಾಡಲೇಬೇಕು. ಅದಕ್ಕೆ ಮಾನ್ಯ ಮುಖ್ಯ ಮಂತ್ರಿಗಳು ಇದಕ್ಕೆ ಸ್ಪಷ್ಟವಾದ ಉತ್ತರ ಕೊಡಬೇಕು. ಮಾಲೀಕರಿಗೆ ಯಾವಾಗ ಕರೆಸುತ್ತೀರಿ, ಯಾವಾಗ ಇದನ್ನು ತೀರ್ಮಾನ ಮಾಡುತ್ತೀರಿ, ಅನೇಕ ಕಡೆಗಳಿಂದ ಬಂದಂತಹ ರೈತರು ಇವತ್ತು ಮಾನ್ಯ ಮುಖ್ಯ ಮಂತ್ರಿಗಳ ಮನೆಯ ಮುಂದೆ ಸತ್ಯಾಗ್ರಹ ನಡೆಸುತ್ತಿದ್ದಾರೆ. ರೈತರು ಬೆಂಗಳೂರಿಗೆ ಬಂದಿದ್ದಾರೆ. ರೈತರ ಸಮಸ್ಯೆ ಬಹಳ ಬೃಹದಾಕಾರವಾಗಿದೆ. ತಾವು ಕೂಡಲೇ ಕಬ್ಬಿನ ದರವನ್ನು 850 ರೂಪಾಯಿಯಿಂದ1250 ರೂಪಾಯಿಗೆ ಜಾಸ್ತಿ ಮಾಡಬೇಕು. ಗೊಬ್ಬರದ ಬೆಲೆ